ಅರ್ಥಪೂರ್ಣವಾದ ಎಲ್ಲ ಕೆಲಸಗಳು ನನಗೆ ಸಂತೋಷ ಕೊಟ್ಟಿವೆ ಅನ್ನಬಹುದೇನೋ. ಇತ್ತೀಚಿನ ವರ್ಷಗಳಲ್ಲಿ ಎಚ್.ಎಸ್. ದೊರೆಸ್ವಾಮಿಯವರ ಜೊತೆ ನಡೆಸಿದ ಹೋರಾಟ ನನ್ನ ಮನಸ್ಸಿಗೆ ತುಂಬಾ ಹತ್ತಿರವಾದುದು. ಭೂಮಿ ಮತ್ತು ವಸತಿಹೀನರಿಗೆ ಅದನ್ನು ಕೊಡಿಸುವ ಹೋರಾಟದಲ್ಲಿ ನಾನು ಉದ್ದಕ್ಕೂ ಅವರ ಜೊತೆ ಕೆಲಸಮಾಡಿದೆ. ಈಗಲೂ ನನ್ನನ್ನು ಆ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇನೆ.

◆ **ನಿಡುಗಾಲದ ನಿಮ್ಮ ಲೋಕಮುಖಿಯಾದ ಜೀವನದಲ್ಲಿ ನಿಮ್ಮನ್ನು ಕೈ ಹಿಡಿದು ನಡೆಸಿದ, ಅಥವಾ ನೀವು ನಂಬಿದ ಸಿದ್ಧಾಂತಗಳನ್ನು ಕುರಿತಂತೆ ಹಾಗೂ ಸಮಕಾಲೀನ ಬದುಕಿನ ಸವಾಲುಗಳು ಮತ್ತು ಅವುಗಳನ್ನು ಎದುರಿಸಬೇಕಾದ ದಾರಿಯ ಬಗೆಗೆ ನಿಮ್ಮ ಆಲೋಚನೆಗಳು?**

ಈಗ ಇಡೀ ಪ್ರಯಾಣವನ್ನೊಮ್ಮೆ ನೋಡಿದರೆ ನನಗನ್ನಿಸುವುದು, ನಾನು ಆರಂಭದಲ್ಲಿ ಬಲಪಂಥೀಯ ವಿಚಾರಗಳಿಂದ ಪ್ರಭಾವಿತಳಾದರೂ ಬಹುಬೇಗ ಅದರಿಂದ ಹೊರಬಂದೆ. ಎಲ್ಲ ವರ್ಗದ, ಜಾತಿಯ, ಲಿಂಗದ ಶೋಷಿತರೂ ಅದರಿಂದ ಹೊರಬರಬೇಕು. ಅದಕ್ಕೆ ನಾನೇನು ಮಾಡಬಹುದು ಎಂದು ಯೋಚಿಸುತ್ತಿದ್ದ ನನಗೆ ಸಹಜವಾಗಿಯೇ ಸಮಾಜವಾದಿ ಚಿಂತನೆ ಪ್ರಿಯವಾಯಿತು. ಸರ್ವರಿಗೆ ಒಳಿತು ಮಾಡಲು ಉದ್ದೇಶಿಸಿದ ಯಾವುದೇ ಹೋರಾಟದ ಜೊತೆಗೂ ನನ್ನನ್ನು ನಾನು ಗುರುತಿಸಿಕೊಂಡಿದ್ದೇನೆ. ಅದರಲ್ಲೂ ದಲಿತ ಮತ್ತು ಮಹಿಳಾಪರ, ಕಾರ್ಮಿಕಪರವಾದ ಎಲ್ಲ ಹೋರಾಟಗಳಲ್ಲೂ ನಾನು ಮುಂಚೂಣಿಯಲ್ಲಿದ್ದೆ ಮತ್ತು ಇದ್ದೇನೆ. ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಸಾಹಿತಿಗಳ ಪೈಕಿ ಮೊದಲು ಅರೆಸ್ಟ್ ಆದವಳೇ ನಾನು. ನಂತರ ಶ್ರೀರಂಗ, ಕೋ. ಚೆನ್ನಬಸಪ್ಪ ಮೊದಲಾದವರೆಲ್ಲ ಅರೆಸ್ಟ್ ಆದರು. ಪತ್ರಿಕೆಯನ್ನು ಅಚ್ಚಿಗೆ ಕಳಿಸುವ ಒತ್ತಡದಿಂದಾಗಿ ಅರೆಸ್ಟ್ ಆಗಲು ಹಿಂಜರಿಯುತ್ತಿದ್ದ ಲಂಕೇಶ್ ಅವರನ್ನು ನಾನೇ ಹುರಿದುಂಬಿಸಿ ಬಸ್ಸಿಗೆ ಹತ್ತಿಸಿಕೊಂಡೆ. ಲಂಕೇಶರ ಜೊತೆ ಏನೆಲ್ಲ ಮನಸ್ತಾಪಗಳಿದ್ದಾಗಲೂ ಅವರು ಕರೆ ನೀಡಿದ ಎಲ್ಲ ಚಳವಳಿಗಳಲ್ಲೂ ನಾನು ಅವರ ಜೊತೆಗಿದ್ದೆ.

◆ **ತಾತ್ವಿಕತೆಯ ವಿಷಯವನ್ನೇ ಮುಂದುವರೆಸುವುದಾದರೆ, ನೀವು ಸಾಕಷ್ಟು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದೀರಿ, ವಿಮರ್ಶಾ ಕೃತಿಗಳನ್ನೂ ಪ್ರಕಟಿಸಿದ್ದೀರಿ. ಸ್ತ್ರೀವಾದಿ ತಾತ್ವಿಕತೆ ಇಂದು ಬೇರೊಂದು ಮಜಲನ್ನು ಮುಟ್ಟಿದೆ. ಮೂರನೇ ಅಲೆಯ ಸ್ತ್ರೀವಾದ ಇಂದು ಪ್ರಚಲಿತದಲ್ಲಿದೆ. ಸಾಂಸ್ಕೃತಿಕ ಸ್ತ್ರೀವಾದ, ಮರುಗಳಿಕೆಯ ಸ್ತ್ರೀವಾದ ಇವೆಲ್ಲ ಇಂದು ಮುನ್ನೆಲೆಯಲ್ಲಿವೆ. ಈ ಹಿನ್ನೆಲೆಯಲ್ಲಿ ನಿಮ್ಮ ಆಯ್ಕೆ ಅಥವಾ ನಿಲುವುಗಳು?**

ಸ್ತ್ರೀವಾದದ ತಾತ್ವಿಕತೆಗಳನ್ನು ನಾನು ಆಳವಾಗಿ ಅಧ್ಯಯನ ಮಾಡಿಲ್ಲ. ಯಾವುದೇ ತಾತ್ವಿಕತೆಗಿಂತ ಹೆಚ್ಚಾಗಿ ಸಮಸ್ಯೆಯೊಂದಕ್ಕೆ ಪರಿಹಾರ ಹುಡುಕುವುದು ನನಗೆ ಮುಖ್ಯ. ನಾನಂತೂ ಸದಾ ಮಹಿಳೆಯರ ಪರ ಇದ್ದೇನೆ. ಹೆಣ್ಣುಮಕ್ಕಳಿಗೆ ಎಲ್ಲೇ ಅನ್ಯಾಯವಾಗುತ್ತಿದೆ, ತೊಂದರೆಯಾಗುತ್ತಿದೆ ಎಂದರೂ ನಾನಲ್ಲಿ ಹಾಜರು. ಎಷ್ಟೋ ಬಾರಿ ನಾನು ಹೆಣ್ಣುಮಕ್ಕಳನ್ನು ಮನೆಗೇ ಕರೆದುಕೊಂಡು ಬಂದು ಇಟ್ಟುಕೊಂಡದ್ದೂ ಇದೆ. ಹೀಗಾಗಿ, ನನ್ನ ವ್ಯಕ್ತಿತ್ವ, ಬದುಕು, ಉದ್ದಕ್ಕೂ ಎದುರಿಸಿದ ಸಂಘರ್ಷಗಳು ಈ ಎಲ್ಲವೂ ಜನಮುಖಿಯಾದವು. ಜನರ ಕಷ್ಟಸುಖಗಳೊಂದಿಗೆ ನಾನು ಬೆರೆತುಹೋಗಿದ್ದೇನೆ. ಸಾಹಿತ್ಯದ ವಿಷಯವನ್ನು ಮಾತನಾಡುವುದಾದರೆ – ದ್ವೇಷವನ್ನೂ ಕೋಮುದ್ವೇಷವನ್ನೂ ದೇಶ ಅಪ್ಪಿಕೊಂಡಿರುವ ಕರಾಳ ದಿನಗಳಿವು. ಈ ದ್ವೇಷವನ್ನು ಎದುರಿಸುತ್ತಲೇ ಬರೆಯುತ್ತಿರುವ ಯುವಪೀಳಿಗೆ ನನ್ನಲ್ಲಿ ಬೆರಗು ಹುಟ್ಟಿಸಿದೆ. ಅಕ್ಷರಸ್ಥರಾಗುತ್ತಿರುವ ತಳ ಸಮುದಾಯ ಹಾಗೂ ಅಲ್ಪಸಂಖ್ಯಾತರು ಸಾಹಿತ್ಯದ ಮೂಲಕ ಹೊಸ ಬೆರಗನ್ನು ಹುಟ್ಟಿಸುತ್ತಿದ್ದಾರೆ. ಹೂತಿಟ್ಟ ಸತ್ಯಗಳನ್ನು ಹೊರಗೆಳೆಯುತ್ತಿದ್ದಾರೆ. ಸಾಹಿತ್ಯ ವಿಮರ್ಶೆಯ ಮಾನದಂಡ ಬದಲಾಗಬೇಕು. ಬದುಕಿಗೆ, ನೋವಿಗೆ ಹತ್ತಿರವಾಗುವ ಈ ಹೊಸ ಪೀಳಿಗೆಯ ಸಾಹಿತ್ಯದ ಸ್ಥಾನ ದೊಡ್ಡದು. ಇವರು ನಾಳಿನ ಭರವಸೆ. ●